ರಂಜಿತಾ ನಿಟ್ಲಿ, ಮಾವಿನಸರ
*ಗೋಲೀಬಾರ್‌ಗೂ ಜಾಲೀ ಬಾರ್‌ಗೂ ಏನ್ ವ್ಯತ್ಯಾಸ ಗುರು?*



ಅಲ್ಲಿ ಗುಂಡು ಹಾರಿಸುತ್ತಾರೆ, ಇಲ್ಲಿ ಗುಂಡು ಏರಿಸುತ್ತಾರೆ.

ಮಹಾಂತಯ್ಯ ಕೆ. ಮಠ, ಹೂವಿನಹಳ್ಳಿ
*ಇಲ್ಲೊಬ್ಬ ಕಟ್ಟಿಕೊಂಡ ಹೆಂಡತಿಯನ್ನು ಬಿಡುತ್ತೇನೆ, ಆದರೆ ಚಟ ಬಿಡುವುದಿಲ್ಲ ಎನ್ನುತ್ತಾನಲ್ಲಾ...?*
ಸರಿ. ಚಟ್ಟ ಸೇರುವ ಮುಂಚೆ ವಿಮೆ ಮಾಡಿಸಿಬಿಡಿ. ಹೆಂಡತಿಗೆ ಕೆಟ್ಟ ಗಂಡ, ಗಂಡಾಂತರ ಎರಡೂ ತಪ್ಪುತ್ತದೆ!

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ಲೈಂಗಿಕತೆಯೂ ಒಂದು ಧ್ಯಾನ ಎಂಬುದು ಎಷ್ಟರ ಮಟ್ಟಿಗೆ ಸರಿ?*
ಸರಿಯೇ; ಹದಿಹರೆಯದಿಂದ ಮುಪ್ಪಿನವರೆಗೆ ಮನುಕುಲಕ್ಕೆ ಇದೇ ಧ್ಯಾನ!

ಎಸ್.ಜಿ. ಕರನಂದಿ, ಹುನಗುಂದ
*ಮಹಿಳೆಯರು ಮಧ್ಯರಾತ್ರಿಯಲ್ಲೂ ನಿರ್ಭಯವಾಗಿ ತಿರುಗಾಡುವ ಕಾಲ ಬಂದೀತೆ?*



ಈಗಲೇ ಬಂದಿದೆಯಲ್ಲಾ! ಶಿವರಾತ್ರಿಯಂದು, ದೇವಸ್ಥಾನದ ಸುತ್ತಮುತ್ತ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ನಾವು ಜೀವನದಲ್ಲಿ ಯಾವುದನ್ನು ಮರೆಯಬೇಕು, ಯಾವುದನ್ನು ಮರೆಯಬಾರದು?*
ತೊರೆಯುವುದನ್ನು, ಬೆರೆಯುವುದನ್ನು!

ಪ್ರದ್ಯುಮ್ನ ಪಿ.ಬಿ. ದಾವಣಗೆರೆ
*ಕಾಸಿದ್ರೆ ಕೈಲಾಸ; ಕೈಲಿ ಕೂಸಿದ್ರೆ...?*
ಹೆಂಡತಿಗೆ ಮಂದಹಾಸ; ನಿಮಗೆ ದೈನಾಸ!

ರಾಜೇಂದ್ರ ಇಂಗಳಗಿ, ರಾಮದುರ್ಗ
*ಇಲ್ಲೊಬ್ಬಳು ತನ್ನ ಗಂಡನ ಜೊತೆ ಪಶುವಿನ ತರಹ ವರ್ತಿಸುತ್ತಾಳಲ್ಲಾ...?*
ಪಶುವಿನೊಡನೆ ಪಶುವಿನಂತೆ ಇರುವುದೇ ಸಹಬಾಳ್ವೆಯ ಮರ್ಮ!

ಬಿ.ಎಸ್. ಯಶಸ್ವಿನಿ, ಮಾದಾಪುರ
*ಭಟ್ಟಂಗಿಗೂ, ಭಂಟನಿಗೂ ಇರುವ ವ್ಯತ್ಯಾಸವೇನು ಅಂಕಲ್?*
ಭಟ್ಟಂಗಿ ಅಡ್ವರ್ಟೈಸ್‌ಮೆಂಟ್ ವಿಭಾಗದ ಮುಖ್ಯಸ್ಥ, ಭಂಟ ಸಪ್ಲೈಯರ್!

ಪಿ. ಗೋವಿಂದರಾಜ್, ಶಿವಮೊಗ್ಗ
*ಭಾವನೆಗಳು ಸತ್ತುಹೋದಾಗ ಮಾನವೀಯ ಗುಣಗಳು ದೂರವಾಗುತ್ತವೆ. ಮನದಾಳದ ಪ್ರೀತಿ ಸತ್ತಾಗ...?*
ಬದುಕಿನ ಮರ ಸತ್ತಿರುವುದಿಲ್ಲವಲ್ಲ; ಬದುಕು ಇರುವವರೆಗೆ ಪ್ರೀತಿ ಮತ್ತೆ ಮತ್ತೆ ಚಿಗುರುತ್ತದೆ, ಟಿಸಿಲೊಡೆಯುತ್ತದೆ!

ಎಚ್.ಆರ್. ದೇಸಾಯಿ, ರಾಯಚೂರು
*ಮನುಷ್ಯ ಜೀವನದಲ್ಲಿ ಯಾವುದನ್ನು ಮರೆಯಲೇಬಾರದು?*
ಉಸಿರಾಡುವುದನ್ನು!

ನೇ. ಶಿವಕುಮಾರ್, ಶಿರಾ
*ಟೀನೇಜ್ ಲವ್‌ಗೂ, ಅಂಕಲ್ ಆಂಟಿ ಲವ್‌ಗೂ ಇರುವ ಭಿನ್ನತೆ ಏನು ಗುರು?*
ಟೀನೇಜ್ ಲವ್ ಆಟೋ ಚಲನೆಯಂತೆ ಅಡ್ಡಾದಿಡ್ಡಿ; ಅಂಕಲ್ ಆಂಟಿ ಲವ್ ಹಳಿ ತಪ್ಪದ ರೈಲು!

ಶ್ರುತಿ ಎಸ್. ರಮೇಶ್, ಮೈಸೂರು
*ವ್ಯಕ್ತಿ ಸತ್ತಾಗಿನ ಮೆರವಣಿಗೆಯಲ್ಲೂ ಪಟಾಕಿ ಹೊಡೆಯುತ್ತಾರೆ, ಬದುಕಿದ್ದಾಗಲೂ ಮೆರವಣಿಗೆ ಮಾಡಿ ಪಟಾಕಿ ಹೊಡೆಯುತ್ತಾರೆ. ವ್ಯತ್ಯಾಸವೇನು ಸಾರ್?*
ಒಂದು ಶೋಕಿ ಸೂಚಕ, ಇನ್ನೊಂದು ಶೋಕಸೂಚಕ!

ಬಸವನಗೌಡ ಹೆಬ್ಬಳಗೆರೆ, ದಾವಣಗೆರೆ
*ಮನ ಮೆಚ್ಚಿ ಮಾಡಿದ ಪ್ರೇಮಕ್ಕೂ, ಮನಿ ಮೆಚ್ಚಿ ಮಾಡಿದ ಪ್ರೇಮಕ್ಕೂ ನಡುವೆ ಇರುವ ವ್ಯತ್ಯಾಸವೇನು?*
ಒಂದು ವಿವಾಹಕ್ಕೆ ದಾರಿ, ಮತ್ತೊಂದು ವಿವಾದಕ್ಕೆ!


## ಬಹುಮಾನಿತ ಪ್ರಶ್ನೆ

ಆರಿಫ್, ದಾವಣಗೆರೆ
*ಪ್ರೀತಿ ಏಕೆ ಭೂಮಿ ಮೇಲಿದೆ?*
ಪಾರ್ಕು, ಮರ, ಐಸ್‌ಕ್ರೀಂ ಪಾರ್ಲರ್‌ರು, ಸಿನೆಮಾ ಥಿಯೇಟರು ಎಲ್ಲವೂ ಭೂಮಿಯ ಮೇಲೆಯೇ ಇರುವುದರಿಂದ!

ಗೀತಾ ಬರ್ಲ, ಬೆಂಗಳೂರು
*ಹೆಣ್ಣಿನ ಕಷ್ಟಗಳ ಬಗ್ಗೆ ಗಂಟೆಗಟ್ಟಲೆ ಭಾಷಣ ಬಿಗಿಯುವವರೆಲ್ಲ ತಮ್ಮ ಮನೆಯ ಹೊಸ್ತಿಲು ತುಳಿದ ಹೆಣ್ಣನ್ನು ಸುಖವಾಗಿ ನೋಡಿಕೊಳ್ಳುತ್ತಾರೆಯೇ?*
ಸಾಧ್ಯವೇ ಇಲ್ಲ. ನುಡಿ ಜಗತ್ತಿಗೆ ತಕ್ಕಂತೆ, ನಡೆ ಗತ್ತಿಗೆ ತಕ್ಕಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಪುರಾಣಕಾಲದಲ್ಲಿಯೂ ಭಿನ್ನಮತ ಇತ್ತೆ?*
ನಾರದನ ಕಾಲದಿಂದಲೂ ಇದೆ! **In fact**, ನಾರದನೇ ಭಿನ್ನಮತದ ಜನಕ!

ಮಹಾವೀರ ಕಾಸರ, ಶಿವಮೊಗ್ಗ
*ವ್ಯವಸ್ಥಿತವಾಗಿ ಬಲೆ ಕಟ್ಟುವ ಜೇಡ ಯಾವ ಕೋರ್ಸ್ ಮಾಡಿದೆ?*
ಬಿಎಸ್‌ಸಿ, ಎಂಬಿಎ (ಬ್ಯಾಚುಲರ್ ಆಫ್



ಸ್ಟೇಬಲ್ ಕಾಬ್‌ವೆಬ್ಸ್, ಮಾಸ್ಟರ್ ಆಫ್ ಬಿಲ್ಡಿಂಗ್ ಎಂಡ್ ಆರ್ಕಿಟೆಕ್ಚರ್)

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಮನುಷ್ಯನ ಚಿಂತೆ ದೂರವಾಗುವುದು ಯಾವಾಗ?*
ನಿಜವಾದ ಸ್ನೇಹಿತ ಸಿಕ್ಕಿದ ತಕ್ಷಣ!

ಪಿ.ಜೆ. ರಾಘವೇಂದ್ರ, ಮೈಸೂರು
*ಎರಡೆರಡು ಸೆಲ್‌ಫೋನ್ ಇಟ್ಟವರು ತಮ್ಮ ಕಿಸೆಯಲ್ಲಿ ಪೆನ್ ಇಡುವುದಿಲ್ಲವೇಕೆ?*
ಪೆನ್ ಇಸ್ಕೊಂಡವ್ರು ವಾಪಸ್ ಕೊಡಲ್ಲವಲ್ಲಾ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಚಿನ್ನ, ಬೆಳ್ಳಿ, ಮುತ್ತು, ಹವಳ ಸುಖ ನೀಡುವಂತಿದ್ದರೆ?*
ಸುಖದ ಬೆಲೆ ಬಹಳ ದುಬಾರಿಯಾಗುತ್ತಿತ್ತು!

■ ರಾಮ್